

ಶ್ರುತಿ



ಎಸ್. ನಾರಾಯಣ್




# ವಾರದ ದಿನಗಳಲ್ಲಿ ಮುದ ನೀಡುವ 'ಮಜಾಭಾರತ'

ಕನ್ನಡದಲ್ಲಿ ಮನರಂಜನಾ ಟೆಲಿವಿಷನ್ ಬಹಳ ಮುಂದುವರಿದಿದೆ. ಈಗ ಕನ್ನಡ ಚಾನೆಲ್‌ಗಳ ಧಾರಾವಾಹಿಗಳು ಹಿಂದಿಯೂ ಸೇರಿದಂತೆ ಯಾವುದೇ ಭಾಷೆಗೆ ಹೋಲಿಸಿದರೆ ಗುಣಮಟ್ಟದಲ್ಲಾಗಲೀ, ಲುಕ್ ಅಂಡ್ ಫೀಲ್‌ನಲ್ಲಾಗಲೀ ಕಡಿಮೆ ಎಂದೆನಿಸುವುದಿಲ್ಲ. ಕನ್ನಡ ಚಾನೆಲ್‌ಗಳ ರಿಯಾಲಿಟಿ ಶೋಗಳೂ ಅಷ್ಟೆ. ಯಾವುದೇ ಅಂತಾರಾಷ್ಟ್ರೀಯ ಮಟ್ಟದ ಶೋಗಳ ಮಟ್ಟಕ್ಕೆ ನಿಲ್ಲುತ್ತವೆ. ಕನ್ನಡ ಮನರಂಜನಾ ಟೆಲಿವಿಷನ್ ಪರದೆಯಲ್ಲಿ ಈ ಬದಲಾವಣೆ ತಂದಿರುವುದರಲ್ಲಿ ಕಲರ್ಸ್ ಕನ್ನಡ ಚಾನೆಲ್‌ನ ಕೊಡುಗೆ ಬಹಳ ದೊಡ್ಡದು.

ಕನ್ನಡದಲ್ಲಿ ಟಿವಿ ಕಾರ್ಯಕ್ರಮಗಳ ಗುಣಮಟ್ಟವನ್ನು ಶ್ರೇಷ್ಠ ದರ್ಜೆಗೇರಿಸಿದ ಕೀರ್ತಿ ಈ ಚಾನೆಲ್‌ಗೆ ಸಲ್ಲಬೇಕು. ಅಗ್ನಿಸಾಕ್ಷಿ, ರಾಧಾರಮಣ, ಪದ್ಮಾವತಿ, ಪುಟ್ಟಗೌರಿ ಮದುವೆ, ಲಕ್ಷ್ಮೀ ಬಾರಮ್ಮದಂತಹ ಧಾರಾವಾಹಿಗಳು, ಬಿಗ್‌ಬಾಸ್, ಸೂಪರ್ ಮಿನಿಟ್, ಡ್ಯಾನ್ಸಿಂಗ್ ಸ್ಟಾರ್ ಮತ್ತಿತರ ರಿಯಾಲಿಟಿ ಶೋಗಳು ಕನ್ನಡ ಕಿರುತೆರೆಯ ಮೇಲೆ ಸಂಚಲನ ಉಂಟು ಮಾಡಿದ ಕಾರ್ಯಕ್ರಮಗಳು. ಈ ರೀತಿ ಹೊಸ ದಾರಿ ತೋರಿದ ಕಲರ್ಸ್ ಸಮೂಹ ಇದೀಗ ತನ್ನ ಹೊಸ ಚಾನೆಲ್ 'ಸೂಪರ್'ನೊಂದಿಗೆ ಕನ್ನಡ ಕಿರುತೆರೆಯಲ್ಲಿ ಇನ್ನೊಂದು ಸಾಹಸಕ್ಕೆ ಕೈ ಹಾಕಿದೆ. ಅದುವೇ ವಾರದ ದಿನಗಳಲ್ಲಿ ರಿಯಾಲಿಟಿ ಶೋಗಳು.

ಸಾಮಾನ್ಯವಾಗಿ ವಾರದ ದಿನಗಳಲ್ಲಿ ಧಾರಾವಾಹಿಗಳು, ವಾರಾಂತ್ಯಕ್ಕೆ ರಿಯಾಲಿಟಿ ಶೋಗಳನ್ನು ಪ್ರಸಾರ ಮಾಡುವುದು ಚಾನೆಲ್‌ಗಳು ಅನುಸರಿಸಿಕೊಂಡು ಬಂದಿರುವ ವಿಧಾನ. ಅಂದರೆ ರಿಯಾಲಿಟಿ ಶೋಗಳನ್ನು ಇಷ್ಟಪಡುವ ಮಂದಿ ವಾರದ ಕೊನೆಯವರೆಗೆ ಕಾಯಲೇಬೇಕು. ಇಷ್ಟವಿರಲಿ ಇಲ್ಲದಿರಲಿ ವಾರದ ದಿನಗಳಲ್ಲಿ ಧಾರಾವಾಹಿಗಳನ್ನು ನೋಡಬೇಕು ಅಥವಾ ಕ್ರಿಕೆಟ್ ನೋಡಬೇಕು ಇಲ್ಲವೇ ನ್ಯೂಸ್ ಚಾನೆಲ್‌ಗಳನ್ನು ವೀಕ್ಷಿಸಬೇಕು. ಈ ವಿಧಾನವನ್ನು ಇದೀಗ ಸೂಪರ್ ಚಾನೆಲ್ ಮುರಿದಿದೆ. ಸೋಮವಾರ, ಮಂಗಳವಾರ ಮತ್ತು ಬುಧವಾರ ರಾತ್ರಿ 9 ಗಂಟೆಗೆ 'ಮಜಾಭಾರತ' ಎಂಬ ಕಾಮಿಡಿ ಕಾರ್ಯಕ್ರಮ ಹಾಗೂ ಗುರುವಾರ, ಶುಕ್ರವಾರ ಹಾಗೂ ಶನಿವಾರ ರಾತ್ರಿ 9 ಗಂಟೆಗೆ 'ಶಾಂತಂ ಪಾಪಂ' ಎಂಬ ನೈಜ ಕ್ರೈಂ ಘಟನೆಗಳಿಂದ ಪ್ರೇರಿತವಾದ ಕಾರ್ಯಕ್ರಮ ಪ್ರಸಾರ ಮಾಡುತ್ತಿದೆ. ಇವೆರಡಕ್ಕೂ ಆರಂಭದಿಂದಲೇ ಪ್ರೇಕ್ಷಕರಿಂದ ಅಮೋಘವಾದ ಪ್ರತಿಕ್ರಿಯೆ ಸಿಕ್ಕಿ ಕಾರ್ಯಕ್ರಮಗಳು ಜನಪ್ರಿಯವಾಗಿರುವುದು ವೀಕ್ಷಕರು ಈ ರೀತಿಯ ಕಾರ್ಯಕ್ರಮಗಳನ್ನು ಸ್ವೀಕರಿಸಿರುವುದನ್ನು ಸೂಚಿಸುತ್ತದೆ.

ಮೊದಲೇ ಹೇಳಿದ ಹಾಗೆ ಮಜಾಭಾರತ ಒಂದು ಕಾಮಿಡಿ ಕಾರ್ಯಕ್ರಮ. ಇದರಲ್ಲಿ ರಾಜ್ಯದ ಎಲ್ಲೆಡೆಯಿಂದ ಬರುವ ಕಾಮಿಡಿ ಕಲಾವಿದರ ತಂಡಗಳು ಭಾಗವಹಿಸಿ ಪ್ರಹಸನಗಳನ್ನು ಪ್ರದರ್ಶಿಸುತ್ತವೆ. ಖ್ಯಾತ ನಿರ್ದೇಶಕ ಎಸ್. ನಾರಾಯಣ್ ಹಾಗೂ ಪ್ರಸಿದ್ಧ ನಟಿ ಶ್ರುತಿ ತೀರ್ಪುಗಾರರಾಗಿರುವ ಈ ಕಾರ್ಯಕ್ರಮದ ವಿಶೇಷವೆಂದರೆ ಇದರಲ್ಲಿ ಎಲಿಮಿನೇಷನ್ ಇಲ್ಲ, ಅಂಕಗಳಿಲ್ಲ. ಇಲ್ಲಿರುವುದು ಬರೀ ತಮಾಷೆ, ಹಾಸ್ಯ ಮತ್ತು ಮಜಾ.

ಬಿಗ್‌ಬಾಸ್ ಸ್ಪರ್ಧಿಗಳಾಗಿದ್ದ ನಿರಂಜನ್ ದೇಶಪಾಂಡೆ ಮತ್ತು ಶೀತಲ್ ಶೆಟ್ಟಿ ಆಂಕರ್‌ಗಳಾಗಿರುವ 'ಮಜಾಭಾರತ'ದಲ್ಲಿ ಭಾಗವಹಿಸಲು ಆಗಲೇ ಪೈಪೋಟಿ ಏರ್ಪಟ್ಟಿರುವುದು ಈ ಕಾರ್ಯಕ್ರಮದ ಜನಪ್ರಿಯತೆಗೆ ಹಿಡಿದ ಕೈಗನ್ನಡಿ. ಉಡುಪಿಯ 'ಪ್ರಶಂಸ' ತಂಡ, ಮಂಗಳೂರಿನ 'ಮಸ್ಕಿರಿ,' ಬೆಂಗಳೂರಿನ 'ಕಿರಿಕ್ ಕಲಾಕಾರ್ಸ್' ಮತ್ತು 'ಅರಳೀಕಟ್ಟೆ ಅಣ್‌ತಮ್ಮಾಸ್' ಮತ್ತಿತರ ತಂಡಗಳ ತಮಾಷೆ ಪ್ರಹಸನಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಾಡಿಸುವಲ್ಲಿ ಯಶಸ್ವಿಯಾಗಿವೆ.

ಈ ಕಾರ್ಯಕ್ರಮದ ಇನ್ನೊಂದು ವಿಶೇಷವೆಂದರೆ ಇಲ್ಲಿ ಯಾವ ತಂಡವೂ, ಯಾವ ಕಲಾವಿದರೂ ಖಾಯಂ ಅಲ್ಲ. ಹೊಸ ತಂಡಗಳು ಬರುತ್ತಲೇ ಇರುತ್ತವೆ. ಹಾಗಾಗಿ ಹಾಸ್ಯ ಕಲಾವಿದರಾಗಲು ಬಯಸುವ ಎಲ್ಲ ಕನ್ನಡ ಕಲಾವಿದರಿಗೆ ಮಜಾಭಾರತದಲ್ಲಿ ಅವಕಾಶವಿದೆ. ಇದರಿಂದಾಗಿಯೇ ಆಗಾಗ ಹೊಸ ತಂಡಗಳ ಪ್ರವೇಶ ಆಗುತ್ತಲೇ ಇರುವುದು. ಮಹಿಳಾ ದಿನದ ಅಂಗವಾಗಿ ನಡೆದ ಎಪಿಸೋಡ್‌ನಲ್ಲಿ ಉತ್ತರ ಕರ್ನಾಟಕದ ಸಂಪೂರ್ಣ ಮಹಿಳಾ ತಂಡ ನೀಡಿದ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಕಾರಣವಾಗಿದೆ.

ಮಜಾಭಾರತದಲ್ಲಿ ಪ್ರತಿ ಎಪಿಸೋಡ್‌ನಲ್ಲೂ ಸೆಲೆಬ್ರಿಟಿ ಗೆಸ್ಟ್‌ಗಳು ಬರುವುದರಿಂದ ಹೊಸ ಕಲಾವಿದರಿಗೆ ಅವರ ಎದುರು ಪರ್‌ಫಾರ್ಮ್ ಮಾಡುವ ಅವಕಾಶವೂ ಸಿಗಲಿದೆ. ಮಾತ್ರವಲ್ಲದೆ ಪ್ರತಿಭೆಯಿರುವ ಕಲಾವಿದರಿಗೆ ಸಿನಿಮಾ ರಂಗಕ್ಕೂ ಪ್ರವೇಶಿಸುವ ಬಾಗಿಲು ಇಲ್ಲಿಂದ ತೆರೆಯಬಹುದು. "ಇಲ್ಲಿ ಭಾಗವಹಿಸಲು ಇರುವ ಏಕೈಕ ಮಾನದಂಡವೆಂದರೆ ಹಾಸ್ಯ. ಹಾಸ್ಯ ಮಾಡುವ ಕಲೆ ಗೊತ್ತಿರುವ ಎಲ್ಲ ಕಲಾವಿದರಿಗೆ, ಎಲ್ಲ ಬರಹಗಾರರಿಗೆ ಅವಕಾಶ ನೀಡುವುದು ನಮ್ಮ ಉದ್ದೇಶ' ಎನ್ನುತ್ತಾರೆ ಸೂಪರ್ ಚಾನೆಲ್‌ನ ಪ್ರೋಗ್ರಾಮಿಂಗ್ ಹೆಡ್ ವೈಷ್ಣವಿ ಹಲಗ.

ಸೂಪರ್ ಚಾನೆಲ್‌ನ ಈ ಪ್ರಯತ್ನದಿಂದಾಗಿ ಕಲಾವಿದರಿಗೆ ಅವಕಾಶವಾದರೆ, ಟಿವಿ ನೋಡುಗರಿಗೆ ವಾರದ ದಿನಗಳಲ್ಲೂ ಮಜಾ ನೀಡುವ ಕಾರ್ಯಕ್ರಮ ನೋಡುವ ಸದವಕಾಶ. ದೈನಂದಿನ ಜಂಜಾಟಗಳಿಂದ ಮನೆಗೆ ಮರಳಿದಾಗ ಒಂದಷ್ಟು ಖುಷಿ ನೀಡುವ ಕಾಮಿಡಿ ಕಾರ್ಯಕ್ರಮವೇ ಮಜಾಭಾರತ.



ಶೀತಲ್ ಶೆಟ್ಟಿ



ನಿರಂಜನ್ ದೇಶಪಾಂಡೆ